(ಉ) ವಿಷಯ :- ಅರಕಲಗೂಡು ತಾಲ್ಲೂಕಿನ ಮಜ್ಜನಹಳ್ಳಿಯಲ್ಲಿ ದಿನಾಂಕ 05-01-2009 ರಂದು ಸುಮಾರು 14 ವರ್ಷ ವಯಸ್ಸಿನ ಕುಮಾರಿ ಪ್ರತಿಮಾ ಆರ್. ಕೊಲೆಯ ಬಗ್ಗೆ :

ಶ್ರೀ ಎ. ಮಂಜು (ಅರಕಲಗೂಡು) :- ಮಾನ್ಯ ಉಪಾಧ್ಯಕ್ಷರೆ, ಅರಕಲಗೂಡು ತಾಲ್ಲೂಕಿನ ಮಜ್ಜನಹಳ್ಳಿಯಲ್ಲಿ ದಿನಾಂಕ: 05-01-2009ರಂದು ಸುಮಾರು 14ವರ್ಷ ವಯಸ್ಸಿನ ಕುಮಾರಿ ಪ್ರತಿಮಾ ಆರ್. ಇವರ ಕೊಲೆಯ ಬಗ್ಗೆ ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆಯುತ್ತೇನೆ.

ಡಾ॥ ವಿ.ಎಸ್. ಆಚಾರ್ಯ :- ಮಾನ್ಯ ಉಪಾಧ್ಯಕ್ಷರೆ,

ದಿನಾಂಕ 05-01-2009 ರಂದು ಅರಕಲಗೂಡು ತಾಲ್ಲೂಕು ಕೊಣನೂರು ಪೊಲೀಸ್ ಠಾಣಾ ವ್ಯಾಪ್ತಿಯ ಮಜ್ಜನಹಳ್ಳಿ ಗ್ರಾಮದಲ್ಲಿ (ಠಾಣೆಯಿಂದ 8 ಕಿ.ಮೀ ದೂರ) ಕುಮಾರಿ ಪ್ರತಿಮಾ ತಂದೆ ಕಾಳೇಗೌಡ, 14 ವರ್ಷ 9 ನೇ ತರಗತಿ ಓದುತ್ತಿದ್ದ ಈಕೆ ತನ್ನ ಮನೆಯಿಂದ ಸುಮಾರು 200 ಮೀಟರ್ ದೂರ ಇರುವ ಪಕ್ಕದ ಜಮೀನಿನಲ್ಲಿ ಬಹಿರ್ದೆಸೆಗೆಂದು ಹೋಗಿದ್ದಳು. ಬೆಳಿಗ್ಗೆ ಸುಮಾರು 8 ಗಂಟೆಗೆ ಮನೆ ಬಿಟ್ಟು ಹೋದವಳು ಮನೆಗೆ ಬಾರದಿದ್ದರಿಂದ ತಂದೆಯು ಎಲ್ಲಾ ಕಡೆ ಹುಡುಕಾಡಿದಾಗ ಸುಬ್ಬೇಗೌಡರ ಜೋಳದ ಹೊಲದಲ್ಲಿ ಮಧ್ಯಾಹ್ನ 1 ಗಂಟೆಯ ಸುಮಾರಿಗೆ ಆಕೆಯ ಶವ ದೊರೆತಿರುತ್ತದೆ.

ಇದರ ಬಗ್ಗೆ ಮೃತಳ ತಂದೆ ರಂಗೆಗೌಡರ ಫಿರ್ಯಾದಿನ ಮೇರೆಗೆ ಕೊಣನೂರು ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ : 2/09 ಕಲಂ302 ಐಪಿಸಿ ದಾಖಲಾಗಿರುತ್ತದೆ. ಈ ಪ್ರಕರಣದ ತನಿಖೆಯನ್ನು ಸಿಪಿಐ ಅರಕಲಗೂಡು ಶ್ರೀ ಜಗದೀಶ್‌ರವರು ಕೈಗೆತ್ತಿಕೊಂಡಿದ್ದಾರೆ.

ಈ ಪ್ರಕರಣದಲ್ಲಿ ತಲೆಗೆ ಯಾವುದೋ ಮೊಂಡಾದ ಆಯುಧದಿಂದ ಹೊಡೆದ ಗುರುತಿದ್ದು ಅತ್ಯಾಚಾರ ನಡೆದಿರುವ ಬಗ್ಗೆ ಯಾವುದೇ ಕುರುಹು ಇರುವುದಿಲ್ಲ. ಮೃತಳ ಕಿವಿಯಲ್ಲಿ 2 ಚಿಕ್ಕ ಚಿನ್ನದ ಗುಂಡುಗಳು (ಬೆಲೆ ಸುಮಾರು 400) ರೂ. ಕಾಣೆಯಾಗಿರುತ್ತವೆ.

ಕೃತ್ಯ ನಡೆದ ಸ್ಥಳದಲ್ಲಿ ಯಾವುದೇ ಪ್ರತ್ಯಕ್ಷ ಸಾಕ್ಷಿದಾರರಿರುವುದಿಲ್ಲ ಹಾಗೂ ಸ್ಥಳದಲ್ಲಿ ಯಾವುದೇ ಸುಳಿವು ಲಭ್ಯವಿರುವುದಿಲ್ಲ. ಆದರೂ ಸಹ ಅನೇಕ ಮಂದಿ ಗುಮಾನಿ ಆಸಾಮಿಗಳನ್ನು ತಂದು ಪ್ರಶ್ನಿಸಲಾಗುತ್ತಿದೆ. ತನಿಖೆ ಮುಂದುವರೆಯುತ್ತಿದೆ.

ಡಾ॥ ವಿ.ಎಸ್. ಆಚಾರ್ಯ (ಮಾನ್ಯ ಗೃಹಸಚಿವರು):- ಮಾನ್ಯ ಸದಸ್ಯರು ಈ ಬಗ್ಗೆ ಹೇಳಿದ್ದಾರೆ. ನನಗೆ ವೈಯುಕ್ತಿಕವಾಗಿ ಇದರ ಬಗ್ಗೆ ವಿಚಾರ ಮಾಡಿದ್ದೇನೆ. ನಾನು ಸಂಬಂಧಪಟ್ಟ ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಮಾತನಾಡಿ ಕೆಲವು ಮಾಹಿತಿ ಗಳನ್ನು ತಂದಿದ್ದಾರೆ. ಗುಮಾನಿದಾರರ ಮೇಲಿನ ಸಂಖ್ಯೆಯು ಕಡಿಮೆಯಾಗುತ್ತಿದೆ. ನಾವು ಆ ಪ್ರಕರಣವನ್ನು find out ಮಾಡುತ್ತಿದ್ದೇವೆ. ಅದರ ಬಗ್ಗೆ ತೀವ್ರವಾದಂತಹ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಮಂಜು (ಅರಕಲಗೂಡು) :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಗೃಹಸಚಿವರು ಏನು ಉತ್ತರವನ್ನು ಕೊಟ್ಟಿದ್ದಾರೆ. ಮೊದಲು ಉತ್ತರವನ್ನು ಕೊಡಬೇಕಾದರೆ ಕುಮಾರಿ ಪ್ರತಿಮಾಳ ತಂದೆ ಕಾಳೇಗೌಡ ಎಂದು ಕೊಡುತ್ತಾರೆ. ಆಮೇಲೆ ಈ ಬಗ್ಗೆ ಮೃತಳ ತಂದೆ ರಂಗೇಗೌಡ ಫಿರ್ಯಾದಿ ಮೇರೆಗೆ ಕೊಣನೂರು ಪೊಲೀಸ್ ಠಾಣೆಯಲ್ಲಿ ಅಪರಾಧದ ಸಂಖ್ಯೆ:2:09 ಅವರೇ ಕೊಟ್ಟರು ಎಂದು ಹೇಳುತ್ತಾರೆ. ಈಗ ಅವರು ಕೊಟ್ಟಿರುವಂತಹದ್ದರಲ್ಲಿ ತಂದೆಯ ಹೆಸರನ್ನು ಮಾನ್ಯ ಗೃಹಮಂತ್ರಿಗಳು ಬದಲಾಯಿಸಿದ್ದಾರೆ. ಬಹುಶ: ಇದನ್ನು ನೋಡಿದರೆ ನಮ್ಮ ಜಿಲ್ಲಾ ಪೊಲೀಸ್ ಅಧಿಕಾರಿಗಳು ಮಾಡುತ್ತಿರುವಂತಹ ಈ ತನಿಖೆಯ ಬಗ್ಗೆ ಹೇಳಿದರೆ ಇವರು ಕೊಟ್ಟಿರುವಂತಹ ಉತ್ತರದಲ್ಲಿ ನಿಜವಾಗಲೂ ಕೂಡ ಆ ಮಂದಿ ಗುಮಾನಿ ಆಸಾಮಿ ಗಳನ್ನು ತಂದು ಪರಿಶೀಲಿಸಲಾಗುತ್ತಿದೆ ಎಂದು ಏನು ಹೇಳುತ್ತಿದ್ದಾರೆ. ಇವರು ಹೋದಂತಹ ಕಾಲದಲ್ಲಿ ಅಪರಾಧಿ ಯಾರು ಇದ್ದಾರೆ ಅವನು 6 ದಿವಸಗಳ ಕಾಲ ಗ್ರಾಮವನ್ನು ಬಿಟ್ಟು ಹೊರಗಡೆ ಹೋಗಿರುತ್ತಾನೆ. ಅವನು ಊರಿನಲ್ಲಿ ಇರುವುದಿಲ್ಲ. ಅವನು abscond ಆಗಿರುತ್ತಾನೆ. ಅವನ ಮನೆಗೆ ಇವರು ಹೋಗಿ ತನಿಖೆಯನ್ನು ಮಾಡಿರುತ್ತಾರೆ. ಆದು ಆದ ಮೇಲೆ ಒಬ್ಬ ಪ್ರಭಾವಿ ರಾಜಕೀಯ ವ್ಯಕ್ತಿ ಅವರನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ಸೇರಿಸಿ ಇವನ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಡಿ ಎಂದು ಹೇಳುವಂತಹ ವ್ಯವಸ್ಥೆ ಈ ನಮ್ಮ ಹಾಸನ ಜಿಲ್ಲೆಯ ಪೊಲೀಸ್ ಅಧಿಕಾರಿಗಳು ಮಾಡಿರುವುದು. ಈಗ ಹಳ್ಳಿಗಳಲ್ಲಿ ಬಹುಶ: ಎಲ್ಲರಿಗೂ ಗೊತ್ತಿರುವಂತಹದ್ದು ಯಾರು ಕೊಲೆ ಮಾಡಿದ್ದಾರೆಂದು ಈ ಬಗ್ಗೆ ಎಲ್ಲರಿಗೂ ಗೊತ್ತಿದೆ. Complaint ಕೊಡಬೇಕಾದರೆ ಅವನ ತಂದೆ ಇವನೇ ಹೊಡೆದ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಏತಕ್ಕಾಗಿ ಹೇಳುವುದಕ್ಕಾಗುವುದಿಲ್ಲವೆಂದರೆ, ಇವನು

ನೋಡಿರುವುದಿಲ್ಲ ಅದು ನಿಜ. ಲಭ್ಯವಿರುವುದಿಲ್ಲವೆಂದು ಹೇಳಿರುವುದು ಅವರು ಹೇಳುವುದು ಬೇಕಾಗಿರುವುದಿಲ್ಲ. ಅದು ಎಲ್ಲರಿಗೂ ಗೊತ್ತಿರುವಂತಹ ವಿಚಾರವಾಗಿದೆ. ಈಗ ಎಲ್ಲರಿಗೂ ಗೊತ್ತಿರುವಂತಹದ್ದು ಇಂತಹವನು ಮರ್ಡರ್ ಮಾಡಿದ್ದಾನೆಂದು ಕೊಲೆ ಮಾಡಿದ್ದಾನೆಂದು ಗೊತ್ತಾದರೂ ಕೂಡ ಇಲ್ಲಿಯವರೆಗೂ ಕೂಡ ಅವನನ್ನು ಬಂಧಿಸಿರುವುದಿಲ್ಲ. ದಯಮಾಡಿ ನಾನು ಮಾನ್ಯ ಗೃಹಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಇದು ಗೊತ್ತಿರುವಂತಹ ವಿಚಾರವನ್ನು ಮರೆಮಾಚಬೇಡಿ. ತಮ್ಮ ಸರ್ಕಾರದಲ್ಲಿ ಪೊಲೀಸ್‌ನವರಿಗೆ ಕೊಟ್ಟಂತಹ ವ್ಯವಸ್ಥೆಯಲ್ಲಿ ಶಕ್ತಿಯನ್ನು ತಾವು ಕೊಡಬೇಕು. Especially, ನಮ್ಮ ಜಿಲ್ಲೆಯಲ್ಲಿ ಆಗುತ್ತಿರುವಂತಹ ಪೊಲೀಸ್‌ರಿಂದ ದೌರ್ಜನ್ಯವಾಗುತ್ತಿರುವ ಬಗ್ಗೆ ತಾವು ಏನಾದರೂ ತಿಳಿಯಾಡಬೇಕಾದರೆ ಸಂಬಂಧಪಟ್ಟ ಕೊಲೆಗಾರರನ್ನು ಬಂಧಿಸುವಲ್ಲಿ ಯಶಸ್ವಿಯಾಗಬೇಕು. ತಾವು ಯಾವುದೇ ರಾಜಕೀಯ ಒತ್ತಡಕ್ಕೆ ಯೀಲ್ಡ್ ಅಗಬಾರದೆಂಬ ಮನವಿಯನ್ನು ಮಾಡಿಕೊಂಡು ಈ ಸಂದರ್ಭದಲ್ಲಿ ಮಾನ್ಯ ಗೃಹಸಚಿವರು ಈ ಬಗ್ಗೆ ಈ ಸದನದಲ್ಲಿ ಭರವಸೆಯನ್ನು ಕೊಡಬೇಕು.

ಉಪಾಧ್ಯಕ್ಷರು :- ತಂದೆಯ ಹೆಸರು ವ್ಯತ್ಯಾಸವಾಗಿರುವ ಬಗ್ಗೆ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಡಾ॥ ವಿ.ಎಸ್.ಆಚಾರ್ಯ:- ಫಿರ್ಯಾದುದಾರರು ರಂಗೇಗೌಡರು ಎಂದು ಬಂದಿದೆ. ಅದರ ಬಗ್ಗೆ ನಮ್ಮ ಅಧಿಕಾರಿಗಳಿಂದ ತಿಳಿದುಕೊಳ್ಳುತ್ತೇನೆ. ತಂದೆ ಕಾಳೇಗೌಡ ಎಂದು ಬಂದಿದೆ. ಫಿರ್ಯಾದುದಾರ ಎಂದು ಬರೆಯುವುದಕ್ಕೆ ಮುಂಚೆ ರಂಗೇಗೌಡ ಎಂದು ಬಂದಿದೆ. ಈ ಮೆಸೇಜ್ ಬರುವಾಗ ಏನು ಹೆಚ್ಚು ಕಡಿಮೆಯಾಗಿದೆ ಅದನ್ನು ನಾನು ನೋಡುತ್ತೇನೆ. It will not materially affect our investigation. ತಮಗೆ ನಾನು ಭರವಸೆಯನ್ನು ಕೊಡುವಂತಹದ್ದು ಈ ಕೇಸಿನಲ್ಲಿ ತಮಗೆ ಒಂದು ಭರವಸೆಯನ್ನು ಕೊಡುತ್ತೇನೆ. ಒಂದು ಸಣ್ಣ ವ್ಯತ್ಯಾಸವಾಗಿದೆ. ಈ ಕೇಸಿನಲ್ಲಿ ಅಪರಾಧಿಗಳನ್ನು ಪತ್ತೇ ಹಚ್ಚುವುದಕ್ಕೆ ದೊಡ್ಡ ರೀತಿಯಿಂದ ತೊಂದರೆಯಾಗುವುದಿಲ್ಲ. ನಾನು ತಮಗೆ ಈಗಾಗಲೇ ಹೇಳಿದ್ದೇನೆ. ಇನ್ನೊಮ್ಮೆ ಹೇಳುತ್ತಿದ್ದೇನೆ. We are zeroing in. ಯಾರು ಎಂದು ಹೇಳುವಂತಹದ್ದು ಬಹುತೇಕ ನಿಶ್ಚಯವಾಗುತ್ತಿದೆ. ಅವರ ಮೇಲೆ ಏನು ಮುಲಾಜಿಲ್ಲದೆ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎ. ಮಂಜು :- Thank you, ಧನ್ಯವಾದಗಳು